ದಿನಾಂಕ **25.06.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

ನಾನು ದಿಃ25.09.2025 ರಂದು ಜಿನ್ನೇನಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಪಿ.ಡಿ.ಒ ಆಗಿ ಕರ್ತವ್ಯಕ್ಕೆ ಹಾಜರಾಗಿರುತ್ತೇನೆ. ಅದಕ್ಕಿಂತ ಮುಂಚೆ ನಾನು ಬ್ಯಾಡರಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೆ. ನಾನು ನನ್ನ ಪ್ರಭಾರ ವಹಿಸುಕೊಳುಳವಾಗ ನನ್ನ ಹಿಂದಿನ ಪಿ.ಡಿ.ಒ ರವರಿಂದ ದಾಖಲೆಗಳನ್ನು ಪಡೆದುಕೊಂಡಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಬ್ಯಾಡರಹಳ್ಳಿ ಗ್ರಾಮ ಪಂಚಾಯ್ತಿಯಲ್ಲಿ ಕೆಲಸ ಮಾಡುವಾಗ ವಾದಿಯ ಸಂಸ್ಥೆ ರಾಸಾಯನಿಕ ವಸ್ತುಗಳನ್ನು ನಮ್ಮ ಗ್ರಾಮ ಪಂಚಾಯ್ತಿಗೆ ಸಬರಾಜು ಮಾಡಿದೆ ಎಂದರೆ ಸರಿ. ನಮ್ಮ ಮೇಲಾಧಿಕಾರಿಗಳು ನೀಡುವ ನಿರ್ದೇಶನದ ಮೇರೆಗೆ ನಾವು ಪಂಚಾಯ್ತಿಯಲ್ಲಿ ಕೆಲಸ ಮಾಡುತ್ತೇವೆ ಎದಂರೆ ಸರಿ.

ದಿಃ07.04.2022 ರಂದು ಸರ್ಕಾರವು ರಾಸಾಯನಿಕ ವಸ್ತುಗಳನ್ನು ಖರೀದಿಸಿ ಎಲ್ಲಾ ಪಂಚಾಯ್ತಿಗಳು ಸಾರ್ವಜನಿಕ ಸ್ಥಳಗಳಲ್ಲಿ ಸಿಂಪಡಿಸಬೇಕು ಎಂದು ಆದೇಶ ಆಗಿರುತ್ತದೆ ಎಂದರೆ ಸರಿ. ಈಗ ನಾನು ನೋಡಿದ ಆದೇಶ ನಿಪಿ-2 ಎಂದರೆ ಸರಿ. ನಿಯಮಾನುಸಾರ ಖರೀದಿ ಮಾಡಿ ಎಂದು ನಮೂದಿಸಿರುತ್ತದೆ. ದಿಃ16.09.2022 ರಂದು ಗ್ರಾಮ ಪಂಚಾಯ್ತಿಗೆ ಕೋಡಿ ನಿಂಗೇಗೌಡ ಅದ್ಯಕ್ಷರಾಗಿದ್ದರು ಎಂದರೆ ಸರಿ. ಪಿ.ಡಿ.ಒ ಸುರೇಶ್ ಎಂದರೆ ಸರಿ.

ನಿಪಿ-6 ರಲ್ಲಿರುವ ದೂರವಾಣಿ ಸಂಖ್ಯೆಗಳು ನಮ್ಮ ಪಂಚಾಯ್ತಿ ಅದ್ಯಕರದು ಮತ್ತು ಪಿ.ಡಿ.ಒ ಅವರದು ಎಂದರೆ ಸರಿ. ನಿಪಿ-6 ರಲ್ಲಿ ಪಿ.ಡಿ.ಒ ರವರ ಸಹಿ ಇರುತ್ತದೆ ಎಂದರೆ ನನಗೆ ಅವರ ಸಹಿ ಗೊತ್ತಿಲ್ಲ. ವಸ್ತುಗಳನ್ನು ಸರಬರಾಜು ಮಾಡುವ ಮೊದಲು ನಮ್ಮ ಪಂಚಾಯ್ತಿಯಿಂದ ಆದೇಶ ನೀಡಿದ್ದರು ಎಂದರೆ ನನಗೆ ಹೇಳಲಾಗುವುದಿಲ್ಲ. ಸರಬರಾಜು ಆದೇಶದ ಪ್ರಕಾರ ವಾದಿ ನಮ್ಮ ಪಂಚಾಯ್ತಿಗೆ 60 ಲೀಟರ್ ರಾಸಾಯನಿಕ ವಸ್ತುಗಳನ್ನು ಸರಬರಾಜು ಮಾಡಿರುತ್ತಾರೆ ಎಂದರೆ ಆ ರಾಸಾಯನಿಕ ನಮ್ಮ ಪಂಚಾಯ್ತಿಯಲ್ಲಿ ಇರುತ್ತದೆ ಎಂದರೆ ಸರಿ. ರಾಸಾಯನಿಕ ಸರಬರಾಜು ಮಾಡಿದ ಬಗ್ಗೆ ನಮ್ಮ ಪಂಚಾಯ್ತಿಯವರಿಂದ

ರೂ.77,468/- ಹಣ ಬಾಕಿ ಇದ್ದು ಈ ಬಗ್ಗೆ ನೊಟೀಸ್ ನೀಡಿರುತ್ತಾರೆ ಎಂದರೆ ಆ ಸಮಯದಲ್ಲಿ ನಾನು ಇರಲಿಲ್ಲ. ಅದೇ ರೀತಿ ಪತ್ರ ನಮ್ಮ ಪಂಚಾಯ್ತಿಗೆ ತಲುಪಿದ ಬಗ್ಗೆ ಅಂಚೆ ಸ್ವೀಕೃತಿಯಲ್ಲಿ ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನೊಟೀಸ್ ಗೆ ನಮ್ಮ ಪಂಚಾಯ್ತಿಯಿಂದ ಯಾವುದೇ ಉತ್ತರ ನೀಡಿದ ಬಗ್ಗೆ ನನಗೆ ಗೊತ್ತಿಲ್ಲ. ನೊಟೀಸ್ ಗೆ ಉತ್ತರ ನೀಡಿದ ಬಗ್ಗೆ ನಮ್ಮ ಹಿಂದಿನ ಪಿ.ಡಿ.ಒ ರವರಿಂದ ಕೇಳಿ ಪಡೆದಿರುವುದಿಲ್ಲ. ವಾದಿ ಸಂಸ್ಥೆಗೆ ರಾಸಾಯನಿಕ ಸರಬರಾಜು ಮಾಡಿದ ಹಣವನ್ನು ನೀಡಬೇಕಾಗುತ್ತದೆ ಎಂದು ನಾನು ಮಾಹಿತಿ ಗೊತ್ತಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಹಿಂದೆ ನಾನು ಬ್ಯಾಡರಹಳ್ಳಿ ಪಂಚಾಯ್ತಿಯಲ್ಲಿ ರಾಸಾಯನಿಕ ಸರಬರಾಜು ಆದ ಬಗ್ಗೆ ವಾದಿಗೆ ಹಣ ಪಾವತಿ ಆಗಿಲ್ಲ ಈ ಬಗ್ಗೆ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇರುತ್ತದೆ ಎಂದರೆ ಸರಿ. ವಾದಿ ಸಂಸ್ಥೆಗೆ ನಾನು ಹಣ ನೀಡಲು ಬಾದ್ಯಸ್ಥರು ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.

sd/-

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಚನ್ನರಾಯಪಟ್ಟಣ.